ದಿನಾಂಕಃ **15.02.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

# ಪಾಟೀಸವಾಲುಃ ಪ್ರತಿವಾದಿಪರ ವಕೀಲರಿಂದ

1. ನಾನು ಬಿ.ಕಾಂ ಓದಿದ್ದೇನೆ. ನಾನು 15 ವರ್ಷದಿಂದ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ನನ್ನ ವಾಸ ವಿಜಯನಗರ ಮೈಸೂರು. ನನಗೆ ಹುಚ್ಚೇಗೌಡ ಮತ್ತು ಪುಟ್ಟಶೆಟ್ಟಿ ಪರಿಚಯಸ್ತರು. ಅವರಿಬ್ಬರು ನನ್ನ ಸ್ನೇಹಿತರು. ನಾನು ಪುಟ್ಟಶೆಟ್ಟಿ ಅವರ ಸಂಬಂಧಿ ಎಂದರೆ ಸರಿಯಲ್ಲ. ಸದರಿ ಪುಟ್ಟಶೆಟ್ಟಿ ಅವರ ಅಕ್ಕನ ಮಗಳನ್ನು ಮದುವೆ ಆಗಿದ್ದೇನೆ ಎಂದರೆ ಸುಳ್ಳು. ನಾನು ಸಂಬಂಧಿಯಾಗಿದ್ದರು ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಾದಿ-ಪ್ರತಿವಾದಿಯರು ನನಗೆ ಲಾಯರ್ ಕಛೇರಿಗೆ ನೋಟರಿಗೆ ಹೋಗಬೇಕು , ಹುಣಸೂರಿನಲ್ಲಿ ಸೈಟ್ ಖರೀದಿ ಮಾಡುತ್ತಿದ್ದೇವೆ ಎಂದು ಹೇಳಿದ್ದರು. ಸದರಿ ಕಛೇರಿ ಆರ್ ಟಿ ಒ ಕಛೇರಿ ಹಿಂಭಾಗ ಇತ್ತು. ನಾವು ಲಾಯರ್ ಕಛೇರಿಗೆ 2014 ರಲ್ಲಿ ಹೋಗಿದ್ದೇವು. ಆ ಸಮಯದಲ್ಲಿ ಯಾರು ಯಾವ ದಾಖಲಾತಿಗಳನ್ನು ತಂದಿದ್ದರು ನನಗೆ ಗೊತ್ತಿಲ್ಲ. ವಾದಿ-ಪ್ರತಿವಾದಿಯರು ಎಲ್ಲಾ ದಾಖಲಾತಿಗಳನ್ನು ತಯಾರು ಮಾಡಿಕೊಂಡು ಬಂದಿದ್ದರು. ಸದರಿ ವ್ಯವಹಾರಕ್ಕೆ ಮಧ್ಯಸ್ಥಿಕೆ ಮಾಡಿರುವುದಿಲ್ಲ.

3. ನಿಪಿ.1,2 ಅನ್ನು ಎಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರ 5 ಲಕ್ಷಕ್ಕೆ ಮಾತುಕತೆ ಆಗಿದ್ದು 3,25,000/- ಹಣವನ್ನು 25.09.2014 ರಂದು ವಾದಿ ನೀಡಿರುತ್ತಾರೆ. ವಾದಿ ಪುಟ್ಟಶೆಟ್ಟಿ ಅವರು ನಿವೃತ್ತ ಶಿಕ್ಷಕರು ಎಂದು ತಿಳಿದುಕೊಂಡಿದ್ದೇನೆ.

4. ಸದರಿ ಜಮೀನು ವ್ಯವಸಾಯದ ಜಮೀನು ಅಥವಾ ವ್ಯವಸಾಯೇತರ ಜಮೀನು ನನಗೆ ಗೊತ್ತಿಲ್ಲ. ನಿಪಿ.1,2 ರಲ್ಲಿ ಆಗಿರುವ ಕಾಟು-ಚಿತ್ತುಗಳನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಸದರಿ ಕಾಟು-ಚಿತ್ತುಗಳಿಗೆ ಸಹಿ ಮಾಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಜಮೀನಿಗೆ ಅಲಿನಿಯೇಷನ್ ಆಗಿರುತ್ತದೆ ಎಂಬುದಕ್ಕೆ ದಾಖಲಾತಿಗಳನ್ನು ನೋಡಿಲ್ಲ.

5. ನಿಪಿ.1,2 ರಲ್ಲಿ ಹಣ ತಲುಪಿದೆ ಎಂಬುದರ ಬಗ್ಗೆ ಒಕ್ಕಣೆಕೆ ಇಲ್ಲ. ನಿಪಿ.2 ರಲ್ಲಿ ಕೈಬರವಣಿಗೆ ಆಗಿದೆ ಎಂದರೆ ಸರಿ. ನಿಪಿ.2 ರಲ್ಲಿ ವಾದಿ-ಪ್ರತಿವಾದಿಯರು ಸಹಿ ಮಾಡಿರುದಿಲ್ಲ. ವಾದಿ ಪುಟ್ಟಶೆಟ್ಟಿ ನನಗೆ 15 ವರ್ಷದಿಂದ ಪರಿಚಯ. ಪ್ರತಿವಾದಿ ಸಹ ನನಗೆ 15 ವರ್ಷದಿಂದ ಪರಿಚಯ. ಪ್ರತಿವಾದಿ ಹುಚ್ಚೇಗೌಡ ಅವರ ಉದ್ಯೋಗ ನನಗೆ ಗೊತ್ತಿಲ್ಲ. ಸದರಿಯವರು ಈಗ ಏನೂ ಉದ್ಯೋಗ ಮಾಡುತ್ತಾರೆ ನನಗೆ ಗೊತ್ತಿಲ್ಲ. ಸದರಿಯವರು ನನಗೆ 15 ವರ್ಷದಿಂದ ಪರಿಚಯ ಆಗಿದ್ದರಿಂದ ಅವರ ಉದ್ಯೋಗದ ಬಗ್ಗೆ ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ.

6. 20 ಸಾವಿರ ಮೇಲ್ಪಟ್ಟ ಹಣದ ವ್ಯವಹಾರವನ್ನು ಚೆಕ್ ಅಥವಾ ಡಿಡಿ ಹಾಗೂ ಆರ್ ಟಿ ಜಿ ಎಸ್ ಮೂಲಕ ಮಾಡಿಸಬೇಕು ಎಂಬುದರ ಬಗ್ಗೆ ನನಗೆ ಗೊತ್ತು. 2016ರ ಮುಂಚಿತ ಕೂಡ 20 ಸಾವಿರ ಮೇಲ್ಪಟ್ಟ ಹಣದ ವ್ಯವಹಾರವನ್ನು ಚೆಕ್ ಅಥವಾ ಡಿಡಿ ಹಾಗೂ ಆರ್ ಟಿ ಜಿ ಎಸ್ ಮೂಲಕ ಮಾಡಿಸಬೇಕು ಎಂಬುದರ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಕಪ್ಪು ಶಾಹಿಯ ತಿದ್ದುಪಡಿಗೆ ಸಹ ವಾದಿ ಪ್ರತಿವಾದಿಯರ ಸಹಿ ಇರುವುದಿಲ್ಲ ಎಂದರೆ ಸರಿ.

7. ವಾದಿ ಮೈಸೂರಿನ ವಿವಿಧಿ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರು ಹುಣಸೂರಿನ ಹೆಚ್ಚುವರಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತು. ಸದರಿಯವರು ಮೈಸೂರಿನಲ್ಲಿ ವಿವಿಧ ಚೆಕ್ ಕೇಸುಗಳನ್ನು ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.1,2 ಅನ್ನು ನಾನು ಮತ್ತು ವಾದಿ ಪುಟ್ಟಶೆಟ್ಟಿ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ 1 ಮತ್ತು 2 ನೇ ಪಾರ್ಟಿಗಳು ಬೆರಳಚ್ಚು ಒಂದೇ ಕಡೆ ಟೈಪ್ ಆಗಿರುತ್ತದೆ ಆದರೆ ಹುಚ್ಚೇಗೌಡರ ಸಹಿ ಮೇಲುಗಡೆ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ.2 ಖಾಲಿ ಕಾಗದವನ್ನು ಉಪಯೋಗಿಸಿಕೊಂಡು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

8. ವಾದಿ ಪುಟ್ಟಶೆಟ್ಟಿ ಅವರ ಅಳಿಯ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯ ಪ್ರತಿವಾದಿ ಹುಚ್ಚೇಗೌಡರ ಮಗನಿಗೆ ಕೆಲಸ ಕೊಡಿಸುತ್ತೇನೆ ಎಂದು ಸುಮಾರು ಚೆಕ್ ಹಾಗೂ ನಿಪಿ.1,2 ರಂತ ದಾಖಲಾತಿಗಳಿಗೆ ಸಹಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.1,2 ಕ್ಕೆ ನನ್ನ ಜೊತೆ ಮೈಸೂರಿನ ಇನ್ನೊಬ್ಬ ವ್ಯಕ್ತಿ ಸಹಿ ಹಾಕಿರುತ್ತಾರೆ. ಸದರಿಯವರನ್ನು ಯಾರು ಕರೆತಂದರು ನನಗೆ ಗೊತ್ತಿಲ್ಲ. ವಾದಿ ಪುಟ್ಟಶೆಟ್ಟಿ ಅವರ ಹೇಳಿಕೆ ಮೇರೆಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಲಾಯರ್ ಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.